## ಪ್ರಾರ್ಥನೆ

# ಶ್ರೀ ಕೃಷ್ಣಾಷ್ಟಕಮ್ - ೨

**ಭುವೋ ಭರಾವತಾರಕಂ ಭವಾಬ್ಧಿ ಕರ್ಣಧಾರಕಂ**
**ಯಶೋಮತೀಕಿಶೋರಕಂ ನಮಾಮಿ ಚಿತ್ತಚೋರಕಮ್ ।**
**ದೃಗಂತಕಾಂತಭಂಗಿಣಂ ಸದಾಸದಾಲಸಂಗಿನಂ**
**ದಿನೇ ದಿನೇ ನವಂ ನವಂ ನಮಾಮಿ ನಂದಸಂಭವಮ್ ॥ ೫ ॥**

ಭೂಮಿಯನ್ನು ಭಾರದಿಂದ ರಕ್ಷಿಸುವ, ಸಂಸಾರಸಾಗರದಲ್ಲಿ (ಭಕ್ತರ ಜೀವನ) ನೌಕೆಯನ್ನು ನಡೆಸುವ, ಯಶೋಮತಿಯ ಪುತ್ರನೂ (ಗೋಪಿಯರ) ಚಿತ್ತ ಚೋರನೂ ಆದ (ಶ್ರೀಕೃಷ್ಣನನ್ನು ನಮಿಸುವೆನು). ಸುಂದರವಾದ ನೋಟವುಳ್ಳ, ಯಾವಾಗಲೂ ಅಲಂಕೃತನಾದ, ಪ್ರತಿನಿತ್ಯ ನೂತನನಾಗಿರುವ ನಂದಕುಮಾರನನ್ನು ನಮಿಸುವೆನು.

**ಗುಣಾಕರಂ ಸುಖಾಕರಂ ಕೃಪಾಕರಂ ಕೃಪಾವರಂ**
**ಸುರದ್ವಿಷನ್ನಿಕಂದನಂ ನಮಾಮಿ ಗೋಪನಂದನಮ್ ।**
**ನವೀನಗೋಪನಾಗರಂ ನವೀನಕೇಲಿಲಂಪಟಂ**
**ನಮಾಮಿ ಮೇಘಸುಂದರಂ ತಡಿತ್ಪ್ರಭಾಲಸತ್ಪಟಮ್ ॥ ೬ ॥**

ಗುಣಗಳ ಖಣಿ, ಸುಖಗಳ ಸಮೂಹ, ಕೃಪಾಕರ, ಶ್ರೇಷ್ಠ ದಯಾಮಯಿ, ದೇವತೆಗಳ ಶತ್ರುಗಳನ್ನು ಸದೆಬಡಿದ ನಂದ ಗೋಪನ ಮಗನು ನೀನಾಗಿರುವೆ. ನವೀನ-ಚತುರ ಗೋಪ, ನವೀನ ಲೀಲಾವಿಹಾರಿ, ಮೋಡದ ವರ್ಣದಂತೆ ಸುಂದರನಾದವನು, ಆಕಾಶದ ಪ್ರಭೆಯಂತೆ ತೇಜಸ್ಸುಳ್ಳ ವಸ್ತ್ರಧಾರಿ ನೀನು. ನಿನ್ನನ್ನು ನಾನು ನಮಿಸುವೆನು.

**ಸಮಸ್ತಗೋಪನಂದನಂ ಹೃದಂಬುಜೈಕಮೋದನಂ**
**ನಮಾಮಿ ಕುಂಜಮಧ್ಯಗಂ ಪ್ರಸನ್ನಭಾನುಶೋಭನಮ್ ।**
**ನಿಕಾಮಕಾಮದಾಯಕಂ ದೃಗಂತಚಾರುಸಾಯಕಂ**
**ರಸಾಲವೇಣುಗಾಯಕಂ ನಮಾಮಿ ಕುಂಜನಾಯಕಮ್ ॥ ೭ ॥**

ಸಮಸ್ತ ಗೋಪರನ್ನು ಸಂತುಷ್ಟಗೊಳಿಸುವವನು, ಹೃದಯ ಕಮಲಗಳಿಗೆ ಏಕಮಾತ್ರ ಸಂತೋಷದಾಯಕನು, ಲತಾಮಂಟಪದಲ್ಲಿರುವವನು, ಮುದಿತ ರವಿಯ ಶೋಭೆಯುಳ್ಳವನು, ಯಾವ ಕಾಮನೆಗಳೂ ಇಲ್ಲದವನಾಗಿದ್ದು, ಜನರಿಗೆ ಎಲ್ಲ ಇಚ್ಛೆಗಳನ್ನೀಯುವವನು ನೀನು. ಶರದಂತೆ ಮನೋಹರವಾದ ಕಟಾಕ್ಷವುಳ್ಳ, ಮುರಳಿಯನ್ನು ಇಂಪಾಗಿ ಊದುವ, ವನಮಾಲಿಯಾದ ಶ್ರೀಕೃಷ್ಣನನ್ನು ನಮಿಸುವೆನು.

**ವಿದಗ್ಧಗೋಪಿಕಾ ಮನೋಮನೋಜ್ಞ ತಲ್ಪಶಾಯಿನಂ**
**ನಮಾಮಿ ಕುಂಜಕಾನನೇ ಪ್ರವೃದ್ಧವಹ್ನಿಪಾಯಿನಮ್ ।**
**ಯದಾ ತದಾ ಯಥಾ ತಥಾ ತಥೈವ ಕೃಷ್ಣ ಸತ್ಕಥಾ**
**ಮಯಾ ಸದೈವ ಗೀಯತಾಂ ತಥಾ ಕೃಪಾ ವಿಧೀಯತಾಮ್ ॥ ೮ ॥**

ಸುಂದರ ಗೋಪಿಯರ ಮನವೆಂಬ ರಮ್ಯವಾದ ಹಾಸಿಗೆಯಲ್ಲಿ ಮಲಗಿರುವವನು, ಕುಂಜವನದಲ್ಲಿ ಹಬ್ಬಿದ ಅಗ್ನಿಯನ್ನು ಕುಡಿದವನು, ಯಾವಾಗ-ಹೇಗೆ, ಯಾವಾಗ-ಹಾಗೆ ಹಾಗೆಯೇ ನನ್ನಿಂದ ಯಾವಾಗಲೂ ಶ್ರೀಕೃಷ್ಣನ ಸತ್ಕಥೆಯು ಹಾಡುವಂತಾಗಲಿ, ಅದರಂತೆಯೇ ಶ್ರೀಕೃಷ್ಣನು ಕೃಪೆ ಮಾಡುತ್ತಿರಲಿ.

— ಶ್ರೀಶಂಕರಾಚಾರ್ಯ

## ಸೂಕ್ತಿಪ್ರಭ

## ಮರಾಠಿ ಸೂಕ್ತಿಗಳು

**ಬು**ದ್ಧಿಬಲದಿಂದ ಮಾಯೆಯನ್ನು ದಾಟಲು ಹೊರಟವರು ಎಲ್ಲೋ ಕಳೆದುಹೋಗುವರು; ಜ್ಞಾನಪಥದಲ್ಲಿ ದಾಟ ಹೊರಟವರನ್ನು ಜಂಭ ಕಬಳಿಸುವುದು; ಗ್ರಂಥಗಳನ್ನು ಅವಲಂಬಿಸುವವರು ಅಹಂಕಾರ, ದರ್ಪಕ್ಕೊಳಗಾಗುವರು; ಕರ್ಮಮಾರ್ಗ ನಿರತರು ಸರಿ-ತಪ್ಪುಗಳನ್ನು ನಿರ್ಧರಿಸಲಾಗದೆ ತೊಳಲಾಡುವರು; ತಾರುಣ್ಯಬಲವನ್ನು ಬಳಸುವವರು ಕಾಮಕ್ಕೊಳಗಾಗುವರು; ಯಜ್ಞಗಳಲ್ಲಿ ನಿರತರಾಗುವವರು ಲೋಭ-ಮೋಹಕ್ಕೊಳಗಾಗುವರು. ಮಾಯೆಯನ್ನು ದಾಟಲು ಅತ್ಯುತ್ತಮ ಮಾರ್ಗವೇ ಭಕ್ತಿಮಾರ್ಗ. ಈ ಮಾರ್ಗದಲ್ಲಿ ಅಹಂಕಾರ, ಮೋಹಗಳಿಗೆ ಬಲಿಯಾಗದಂತೆ ಎಚ್ಚರ ವಹಿಸಬೇಕು.

—ಜ್ಞಾನದೇವ

**ಸಂ**ಗೀತಕ್ಕೆ ಮರುಳಾಗುವ ಜಿಂಕೆಯಂತೆ ನಾವು ದೇಹಭಾವವನ್ನು ಮರೆಯಬೇಕು. ಆವೆಯ ಮರಿ ತನ್ನ ತಾಯಿಯ ಕಡೆಗೆ ನೋಡುವಂತೆ ನಾವು ಭಗವಂತನ ಕಡೆಗೆ ನೋಡಬೇಕು. ಕಾರಂಜಿ ಮೇಲಕ್ಕೆ ಚಿಮ್ಮುವಂತೆ ನಮ್ಮ ಭಾವನೆಗಳು ದೇವರ ಕಡೆಗೆ ಚಿಮ್ಮಬೇಕು. ಏನೇ ಆದರೂ ಭಗವಂತನಿಗೆ ಹೊರತಾದ ಯಾವ ವಸ್ತುವಿನಲ್ಲೂ ನಮ್ಮ ಮನಸ್ಸು ರಮಿಸಬಾರದು.

— ತುಕಾರಾಮ

**ಧ**ರ್ಮ ಮತ್ತು ಪ್ರಾಯೋಗಿಕ ಜೀವನ ಬೇರೆಯಲ್ಲ. ಸಂನ್ಯಾಸ ಸ್ವೀಕಾರವೆಂದರೆ ಜೀವನವನ್ನೇ ಬಿಟ್ಟು ಓಡಿಹೋಗುವುದಲ್ಲ.

— ಬಾಲಗಂಗಾಧರ ತಿಲಕ್